'ಹೌದು ಸ್ವಾಮಿ.'

'ಬಹಳ ಚೂಟಿಯಾಗಿದ್ದಾರೆ ಸ್ವಾಮಿ' ಪ್ರಶಂಸೆಯ ನುಡಿಗಳನ್ನು ಆಡಿದ ಆತ.

'ಎಲ್ಲಾ ಸ್ವಾಮಿಯ ಕೃಪೆ' ಎಂದ ಕೈಮೇಲೆತ್ತಿ ಶಂಭು.

'ನೀವು ಎಷ್ಟು ವರ್ಷದಿಂದ ಬರುತ್ತಿದ್ದೀರಿ ಸ್ವಾಮಿ?' ಆತ ಮತ್ತೆ ಕೇಳಿದ.

ಶಂಭು ನೂರಾರು ಬಾರಿ ತನಗೆ ತಾನೇ ಹೇಳಿಕೊಂಡಿದ್ದ ಮಾತು ಇದು.

'ಇದು ಹನ್ನೊಂದನೆಯ ವರ್ಷ ಸ್ವಾಮಿ.'

'ಹೌದೇನು?! ನೀವು ಪುಣ್ಯಾತ್ಮರು ಸ್ವಾಮಿ' ಅಚ್ಚರಿಯಿಂದ ಆತ ನುಡಿದ.

'ಎಲ್ಲಾ ಸ್ವಾಮಿಯ ಕೃಪೆ.'

'ಸ್ವಾಮಿಯ ಕರುಣೆ ಅಪಾರ' ಆತ ತಲೆಯಾಡಿಸುತ್ತಾ ನುಡಿದ. ಕ್ಷಣಕಾಲ ಮೌನ ಆವರಿಸಿತು.

ಶಂಭುವಿನ ದೃಷ್ಟಿ ಸುತ್ತ ಹರಿಯಿತು. ಇವರ ಹಾಗೆ ಬೆಂಕಿಯ ಸುತ್ತ ಕುಳಿತು ಬಿಸಿ ಕಾಸಿಕೊಳ್ಳುತ್ತಾ, ಅರೆನಿದ್ರಾವಸ್ಥೆಯಲ್ಲಿ ತೂಕಡಿಸುತ್ತಾ ಕುಳಿತಿದ್ದ ಅನೇಕರನ್ನು ಕಂಡ. ಸ್ವಾಮಿಯ ಕರುಣೆಗಾಗಿ ಕೈಚಾಚಿ ಅದೆಷ್ಟು ಜನ ಬಂದಿದ್ದಾರೆ. ವರ್ಷ ವರ್ಷವೂ ಸ್ವಾಮಿಯ ಭಕ್ತರ ಸಂಖ್ಯೆ ಏರುತ್ತಲೇ ಇದೆ. ಸ್ವಾಮಿಯ ಖ್ಯಾತಿ ದಶದಿಕ್ಕುಗಳಿಗೆ ಹರಡುತ್ತಿದೆ ಎಂದುಕೊಂಡ ಶಂಭು.

ಮದುವೆಯಾಗುವುದಕ್ಕೆ ಒಂದು ವರ್ಷ ಮುಂಚಿನಿಂದಲೇ ಶಂಭು ಸ್ವಾಮಿಗೆ ಹೋಗಿ ಬರಲು ಆರಂಭಿಸಿದ್ದ. ಈಗ ತನ್ನೊಡನೆ ಒಂಬತ್ತು ಮತ್ತು ಆರು ವರ್ಷದ ಮಕ್ಕಳಿಬ್ಬರನ್ನು ಕರೆದುಕೊಂಡು ಬರಲು ಆರಂಭಿಸಿದ್ದ. ಬಹಳ ಜನ, 'ಶಂಭು, ಇದೇನು ಹುಚ್ಚಾಟ. ಈ ಮಕ್ಕಳಿಗೆ ಇನ್ನೂ ನೆಟ್ಟಗೆ ನಡೆಯಲಿಕ್ಕೂ ಬರದು. ಅಂತಹವರನ್ನು ಇಷ್ಟು ಕಠಿಣ ಪರಿಶ್ರಮಕ್ಕೆ ಒಳಪಡಿಸುವುದು ಸರಿಯೇ' ಎಂದು ಕೇಳಿದ್ದರು. ಅವರನ್ನು ಕರೆದುಕೊಂಡು ಹೋಗುವುದು ನನ್ನ ಕೆಲಸ. ಅದನ್ನು ಹೇಗಾದರೂ ನಿಭಾಯಿಸುತ್ತೇನೆ. ಹೆಗಲ ಮೇಲೆ ಹೊತ್ತಾದರೂ ಸರಿ' ಎಂದಿದ್ದ ಅವನು.

ಚಿಕ್ಕವನಿಗೆ ನಡೆಯುವುದು ಕಷ್ಟವೇ ಆಗುತ್ತಿತ್ತು. ಹಾಗಾಗಿ ದಿನದ ಮುಕ್ಕಾಲು ದೂರವನ್ನು ಶಂಭು ಅವನನ್ನು ಹೊತ್ತೇ ಸಾಗಿಸುತ್ತಿದ್ದ.

ಶಂಭುವಿನ ದೃಷ್ಟಿ ಮತ್ತೆ ನಗುತ್ತಿದ್ದ ಮಕ್ಕಳಿಬ್ಬರ ಕಡೆ ಹೋಯಿತು. ಸ್ವಾಮಿಯ ಬಳಿ ಇವರಿಗಾಗಿ ಏನು ಕೇಳಲಿ? ಸ್ವಾಮಿಯ ಬಳಿ ಹೋದಾಗ ನನ್ನ ಬಾಯಿಯೇ ಹೊರಡದಲ್ಲ. ನಾನು ಮೂಕನಾಗುತ್ತೇನೆ. ಕಣ್ಣಲ್ಲಿ ಜಳಜಳನೆ ನೀರು ತುಂಬಿ ಹರಿದು ದೃಷ್ಟಿ ಕೂಡ ಮಂಕಾಗುತ್ತದೆ. ಇನ್ನು ನನಗಾಗಿ ಮತ್ತು ಮಕ್ಕಳಿಗಾಗಿ ಏನನ್ನು ಕೇಳುವುದು ಉಳಿಯಿತು.

ಈಗಲೇ ಕೇಳಬಾರದೇಕೆ?

ಸ್ವಾಮಿ, ನೀನು ಅನಂತ ಕರುಣಾಳು. ನನ್ನ ಜೀವನ ಹೇಗಾದರೂ ಇರಲಿ, ನನಗೆ ಅದರ ಬಗ್ಗೆ ಚಿಂತೆಯಿಲ್ಲ. ಈ ಹುಡುಗರು ಓದಿ ಮುಂದಕ್ಕೆ ಬರಬೇಕು. ನಾನು ಊಟಕ್ಕೆ, ಉಡುಗೆಗೆ ತೊಂದರೆಪಟ್ಟ ಹಾಗೆ ಇವರು ಪಡಬಾರದು. ಇವರು ಶ್ರೀಮಂತರಾಗಿ ಬಾಳಬೇಕು. ನನ್ನನ್ನು ಅವಹೇಳನ ಮಾಡುವವರ ಮುಂದೆ ಇವರು ತಲೆ ಎತ್ತಿ ನಿಲ್ಲಬೇಕು. ತಪ್ಪದೆ ನನ್ನ ಮಾತನ್ನು ನಡೆಸಿಕೊಡು ಸ್ವಾಮಿ.

ಹೀಗೆ ವಿನೀತನಾಗಿ ಪ್ರಾರ್ಥಿಸುತ್ತಿದ್ದ. ಶಂಭುವಿನ ದೃಷ್ಟಿ ದೂರದ ದಿಗಂತದತ್ತ ಹರಿಯಿತು.

ಕತ್ತಲಲ್ಲಿ ಸುತ್ತ ಹರಡಿದ್ದ ಮಿಣುಕುದೀಪಗಳ ನಡುವೆ, ಜಾಜ್ವಲ್ಯಮಾನವಾದ ತಾರೆಯಂತೆ, ಒಂದು ಉಜ್ವಲ ಪ್ರಭೆ ಮೇಲಕ್ಕೇಳುತ್ತಿತ್ತು.

★★★